**ಭದ್ರಾವತಿಯ 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿರವರ ನ್ಯಾಯಾಲಯ.**

**ಸಿ.ಸಿ.ಸಂಖ್ಯೆ: 6678/2024**

ಫಿರ್ಯಾದಿಃ ಹೊಳೆ ಹೊನ್ನೂರು ಪೊಲೀಸ್ ಠಾಣೆ, ಭದ್ರಾವತಿ.

**– ವಿರುದ್ಧ –**

ಆರೋಪಿತಃ 1. ಬಸವರಾಜ ಬಿನ್ ಲೇಟ್ ಚೆನ್ನವೀರಪ್ಪ, 50 ವರ್ಷ,
ವಾಸಃ ಅಗರದಹಳ್ಳಿ ಗ್ರಾಮ, ಭದ್ರಾವತಿ ತಾಲ್ಲೂಕು,
ಶಿವಮೊಗ್ಗ ಜಿಲ್ಲೆ.

**ದೋಷಾರೋಪಣೆ**

ನಾನು ರವಿ ಕುಮಾರ ವಿ. ಬಿ.ಎ.ಎಲ್., ಎಲ್.ಎಲ್.ಬಿ. C/c ಒಂದನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರ. ದ. ನ್ಯಾ ದಂಡಾಧಿಕಾರಿಗಳು, ಭದ್ರಾವತಿ ಆದ ನಾನು, ಈ ಮೂಲಕ ಮೇಲೆ ಹೆಸರಿಸಿದ ಆರೋಪಿತನಾದ ನಿಮ್ಮ ಮೇಲೆ ಹೊರಿಸುವ ದೋಷಾರೋಪಣೆ ಏನೆಂದರೆ,

ಮೊದಲನೇಯದಾಗಿ, ಭದ್ರಾವತಿ ತಾಲ್ಲೂಕು, ಹೊಳೆಹೊನ್ನೂರು ಪೋಲಿಸ್ ಠಾಣಾ ವ್ಯಾಪ್ತಿಯ, ಅಗರದಹಳ್ಳಿ ವಾಸಿಯಾದ ಸಾಕ್ಷಿ–1 ಪಾರ್ವತಮ್ಮ ರವರಿಗೂ ಹಾಗೂ ಅವರ ಮಗ 1 ನೇ ಆರೋಪಿಯಾದ ನಿಮಗುಾ ಆಸ್ತಿಯ ವಿಚಾರದಲ್ಲಿ ತಕರಾರು ಇದ್ದು, ಆರೋಪಿಯಾದ ನೀವು ಸಾಕ್ಷಿ–1 ರವರ ಮನೆಯ ಬೇಲಿ ಒಳಗೆ ಅಕ್ರಮ ಪ್ರವೇಶ ಮಾಡಿರುತ್ತೀರಿ ಆದ್ದರಿಂದ ಆರೋಪಿಯಾದ ನೀವು ಭಾ.ದಂ.ಸಂ.ಕಲಂ. 447 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ ಎಂದೂ,

ಕೊನೇಯದಾಗಿ, ಮೇಲ್ಕಂಡ ದಿನಾಂಕ, ವೇಳೆ, ಸ್ಥಳ ಹಾಗೂ ಸಂದರ್ಭದಲ್ಲಿ, ಆರೋಪಿಯಾದ ನೀವು ಸಾಕ್ಷಿ–1 ಪಾರ್ವತಮ್ಮ ರವರನ್ನು ಗುರಾಯಿಸಿ ಅವರ ಕಡೆಗೆ ಕೈ ತೋರಿಸಿ ನಿನಗೆ ಒಂದು ಗತಿ ಕಾಣಿಸುತ್ತೇನೆ ಎಂದು ಜೀವ ಬೆದರಿಕೆ ಹಾಕಿರುತ್ತೀರಾ

ಆದ್ದರಿಂದ ಆರೋಪಿಯಾದ ನೀವು ಭಾ.ದಂ.ಸಂ.ಕಲಂ. 504 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ ಎಂದೂ,

ಹಾಗೂ ನೀವು ಮೇಲ್ಕಂಡ ಆರೋಪಗಳಿಗೆ ಇದೇ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಯಾಗತಕ್ಕದ್ದು ಎಂದು ನಿರ್ದೇಶಿಸಿರುತ್ತೇನೆ.

ದಿನಾಂಕಃ 09-06-2025 C/c 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಭದ್ರಾವತಿ.

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ನ್ಯಾಯಿಕ ದಂಡಾಧಿಕಾರಿಗಳ
ನ್ಯಾಯಾಲಯ, ಭದ್ರಾವತಿ.

ಸಿ.ಸಿ.ನಂಃ 6678/2024

1 ನೇ ಆರೋಪಿ ಹೆಸರುಃ ಬಸವರಾಜು

1. ಈಗ ನಿಮಗೆ ತಿಳಿದ ಭಾಷೆಯಲ್ಲಿ ಓದಿ ಹೇಳಲಾದ ದೊಷಾರೋಪಣೆಯ ಸಾರಾಂಶವನ್ನು ಕೇಳಿ ತಿಳಿದು ಅರ್ಥ ಮಾಡಿಕೊಂಡಿರುತ್ತೀರಾ?
ಉತ್ತರಃ ಹೌದು,

2. ನೀವು ತಪ್ಪನ್ನು ಒಪ್ಪಿಕೊಳ್ಳುತ್ತೀರಾ ? ಅಥವಾ ವಿಚಾರಣೆಯಾಗ ಬಯಸುತ್ತೀರಾ?
ಉತ್ತರಃ ಇಲ್ಲ, ವಿಚಾರಣೆ ಆಗಬಯಸುತ್ತೇನೆ.

ಮೇಲ್ಕಂಡ ದೋಷಾರೋಪಣೆಯು ನನ್ನ ಸಂಜ್ಞೆಗೆ ಒಳಪಟ್ಟಿರುತ್ತದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ದಿನಾಂಕಃ09-06-2025

C/c 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್ ಸಿ., ಭದ್ರಾವತಿ

ಆರೋಪಿ ಸಹಿಃ